ವಾರದ ಪತ್ರ

## ಕೊಡಗಿಗೆ ವಾಹಿನಿಗಳ ಕೊಡುಗೆ

**ಕೊ**ಡಗಿನಲ್ಲಿ ಪ್ರಕೃತಿ ವಿಕೋಪಕ್ಕೆ ಗುರಿಯಾದ ವರದಿಗಳನ್ನು ಎಲ್ಲ ವಾಹಿನಿಗಳು ಪ್ರಸಾರ ಮಾಡಿದವು. ಇದಲ್ಲದೆ ಪ್ರಾಕೃತಿಕ ವೈಪರಿತ್ಯಕ್ಕೆ ಕಾರಣವಾದ ಅಂಶಗಳ ಬಗೆಗೆ ಸವಿಸ್ತಾರ ಚರ್ಚೆ, ಸಂವಾದ, ಚಿಂತನ–ಮಂಥನಗಳು ಸಾಕಷ್ಟು ನಡೆದವು. ಇವು ಪ್ರಕೃತಿಯ ಜೊತೆ ನಮ್ಮ ಸಹಚರ್ಯ ಹೇಗಿರಬೇಕು ಎಂಬುದರ ಬಗೆಗೆ ತಿಳಿವು ಮೂಡಿಸಿದವು.

ಇದಲ್ಲದೆ ಬಹತೇಕ ವಾಹಿನಿಗಳು ಕೊಡಗಿನ ನಿರಾಶ್ರಿತರ ನೆರವಿಗೆ ಸಕ್ರಿಯವಾಗಿ ಕೈ ಜೋಡಿಸಿದ್ದು ಅಭಿನಂದನೀಯ. ವಾಹಿನಿಗಳು ಕೇವಲ ಚರ್ಚೆ, ವಾದ, ವಿವಾದಗಳಿಗಷ್ಟೆ ಪರಿಮಿತಿಗೊಳ್ಳದೆ ತಮ್ಮ ಪ್ರಾಮಾಣಿಕ ಸಾಮಾಜಿಕ ಜವಾಬ್ದಾರಿ ಮೆರೆದವು. ಮಾತನಾಡುವುದಷ್ಟೇ ಅಲ್ಲ ಮಾಡಿ ತೋರಿಸುತ್ತೇವೆ ಎಂಬಂತಿತ್ತು ಮಾಧ್ಯಮಗಳ ಈ ನಡವಳಿಕೆ.

—ಡಿ. ದೊಡ್ಡಲಿಂಗೇಗೌಡ, ಕೊಳ್ಳೇಗಾಲ

## ಮತ್ತೊಂದು ಸಿನಿಮಾ ವಾಹಿನಿ

ಕನ್ನಡ ಚಿತ್ರಗಳ ವೀಕ್ಷಕರಿಗೆ 'ಉದಯ ಮೂವೀಸ್' ವಾಹಿನಿಯ ಸಾಲಿಗೆ 'ಕಲರ್ಸ್ ಕನ್ನಡ ಚಲನಚಿತ್ರ' ವಾಹಿನಿ ಸೇರ್ಪಡೆಯಾಗಿದೆ. ಇದರಿಂದ ಕನ್ನಡ ಚಲನಚಿತ್ರಗಳ ವೀಕ್ಷಕರಿಗೆ ಆಯ್ಕೆಗೆ ಅವಕಾಶ ಕಲ್ಪಿಸಿ ಕೊಟ್ಟಿದೆ ಕಲರ್ಸ್ ಸಮೂಹ ವಾಹಿನಿ.

—ಸುಂದರ್, ಬೆಂಗಳೂರು

## ಸಹಜ ಕಲಾವಿದ

'ಮಗಳು ಜಾನಕಿ' ಧಾರಾವಾಹಿ ಚೆನ್ನಾಗಿದೆ. ಚಂದು ಬಾರ್ಗಿ ಪಾತ್ರ ಮಾಡುತ್ತಿರುವ ಕಲಾವಿದ ಮಂಡ್ಯ ರವಿ ಆ ಪಾತ್ರವನ್ನು ತುಂಬಾ ಚೆನ್ನಾಗಿ ನಿರ್ವಹಿಸುತ್ತಿದ್ದಾರೆ. ಅವರ ಮುಖದ ಭಾವನೆಗಳು ತುಂಬಾ ಸಹಜವಾಗಿ ಬರುತ್ತಿವೆ. ಆ ಪಾತ್ರ ಮಾಡುವುದು ಕಷ್ಟ. ಇನ್ನು ನಿರಂಜನ ಸಹ ಒಳ್ಳೆ ನಟ.

– ಶ್ರೀನಿವಾಸನ್, ಮೈಸೂರು

## ಚಿಕ್ಕದಾದರೂ ಚೊಕ್ಕ ಪಾತ್ರ

ಝೀ ವಾಹಿನಿಯ 'ಸುಬ್ಬಲಕ್ಷ್ಮಿ ಸಂಸಾರ'ದಲ್ಲಿ ಸುಬ್ಬಲಕ್ಷ್ಮಿ ಗಂಡ ಗುರುಮೂರ್ತಿ ಕಚೇರಿಯಲ್ಲಿ ಕಾರಕೂನನಾಗಿ ಕೆಲಸ ಮಾಡುತ್ತಿರುತ್ತಾನೆ. ಆತನೇ ರಾಜು ಅಟೆಂಡರ್. ಪಾತ್ರ ಚಿಕ್ಕದಾದರೂ ಚೊಕ್ಕದಾಗಿ ನಿರ್ವಹಿಸುತ್ತಿರುವವನು. ಇಂತಹುದೆ ಪಾತ್ರ ಮಾಡಿ ರಾಷ್ಟ್ರಪ್ರಶಸ್ತಿ ಗಳಿಸಿದ 'ತಬರನ ಕಥೆ' ನೆನಪಾಗುತ್ತದೆ.

—ಎಸ್.ಎನ್. ಮಹಾಬಲ ರಾವ್, ನರಸಿಂಹರಾಜಪುರ

## 'ಪುಟ್ಟ ಗೌರಿ..' ಮುಗಿಯುವುದೆಂದು?

ಕಲರ್ಸ್ ಕನ್ನಡದಲ್ಲಿ ಬರುವ 'ಪುಟ್ಟ ಗೌರಿಯ ಮದುವೆ' ಧಾರಾವಾಹಿ ಮುಗಿಯುವುದೆಂದು? ಕಂತುಗಳು ಬೆಳೆದಂತೆ ಪ್ರೇಕ್ಷಕರ ತಾಳ್ಮೆ ಕಡಿಮೆಯಾಗುತ್ತಿದೆ. ಮರಿಮೊಮ್ಮಗಳು 'ಮಂಗಳ ಗೌರಿ' ಬಂದು ಅಜ್ಜಮ್ಮನ ಬದುಕಿನ ಕತೆ ಸುಖಾಂತರವಾಗುತ್ತದೆ ಎಂದುಕೊಂಡೆವು. ಮಧುರಾ ಅವರ ಮಗಳು ಮದುವೆಯಾಗಿ ಹೋಗಿ ಅವರನ್ನು ಮರೆತಂತೆ ಆಗಿತ್ತು. ಈಗ ಮಗಳೊಂದಿಗೆ ಬಂದು ಸಂತಸ ತಂದರೂ. ಸಾಗರಿಯಂತಹ ಖಳನಾಯಕಿಯರು ಇರುವಾಗ ಕಥೆ ಮುಗಿಯುವುದೆಂತು!

– ಮೇಘನಾ ಜಹಗೀರದಾರ, ಧಾರವಾಡ

## ಮತ್ತೆ ಬರಲಿ 'ಕೋಟ್ಯಧಿಪತಿ'

ಸುವರ್ಣ ಚಾನೆಲ್‌ನಲ್ಲಿ ಸೋಮವಾರದಿಂದ ಶುಕ್ರವಾರದವರೆಗೆ ರಮೇಶ್ ಅರವಿಂದ್ ನಡೆಸಿಕೊಡುತ್ತಿದ್ದ ಪ್ರಶ್ನೋತ್ತರ ಕಾರ್ಯಕ್ರಮ 'ಕನ್ನಡದ ಕೋಟ್ಯಧಿಪತಿ' ಇದ್ದಕ್ಕಿದ್ದ ಹಾಗೆ (ಸೆಪ್ಟೆಂಬರ್ 21) ಮುಕ್ತಾಯವಾದುದನ್ನು ಕಂಡು ತೀರಾ ಬೇಸರವಾಯಿತು. ಈ ಕಾರ್ಯಕ್ರಮ ಮತ್ತೆ ಆರಂಭವಾಗಲಿ.

—ಎಸ್.ಎನ್. ಕೃಷ್ಣಮೂರ್ತಿ, ಕಡೂರು

## ಕೌಶಲ್ಯದ ಅನಾವರಣ!

ಚನ್ನರಾಯಪಟ್ಟಣದಲ್ಲಿ ಝೀ ಕನ್ನಡ ವಾಹಿನಿಯ 'ಡಿಕೆಡಿ ಲಿಟ್ಲ ಮಾಸ್ಟರ್ಸ್'ನ ಅಂತಿಮ ಸ್ಪರ್ಧೆ ನಡೆದು ನಿರೀಕ್ಷಿಸಿದಂತೆ ಪ್ರೀತಂ ಮತ್ತು ಅನ್ವಿಕಾ ಪ್ರಥಮ ಸ್ಥಾನ, ಸೂರಜ್ ಮತ್ತು ಶ್ರಾವ್ಯ ಎರಡನೇ ಸ್ಥಾನ, ಜ್ಞಾನೇಶ ಮತ್ತು ಲಹರಿ ಮೂರನೇ ಸ್ಥಾನ ಪಡೆದರು. ಇದೊಂದು ಜನಪ್ರಿಯ ಮನರಂಜನಾ ಕಾರ್ಯಕ್ರಮ. ಎಲೆ ಮರೆಯ ಕಾಯಿಯಂತಿದ್ದ ಕಲಾ ಪ್ರತಿಭಾವಂತರನ್ನು ತಂದು ವೇದಿಕೆಯ ಮೇಲೆ ಅವರ ಕೌಶಲ್ಯ ಅನಾವರಣಕ್ಕೆ ಅವಕಾಶ ಕಲ್ಪಿಸಿರುವುದು ಶ್ಲಾಘನೀಯ. ಪ್ರತೀ ವಾರವೂ ಹೊಸ ಪರಿಕಲ್ಪನೆಯೊಂದಿಗೆ ನೃತ್ಯವನ್ನು ಆಯೋಜಿಸಿ, ಆಕರ್ಷಕವಾಗಿ ವೇದಿಕೆಯ ಮೇಲೆ ಪ್ರಸ್ತುತಪಡಿಸಿ ಪ್ರೇಕ್ಷಕರಿಗೆ ರಸದೌತಣ ನೀಡಿದ್ದಾರೆ.

—ಕೆ.ಎನ್. ಪ್ರಭಾಕರ ಗುಪ್ತ, ಹಾಸನ

## 'ಮಗಳು ಜಾನಕಿ'ಯಲ್ಲಿ ಹಾಸ್ಯ

'ಮಗಳು ಜಾನಕಿ' ಧಾರಾವಾಹಿಯಲ್ಲಿ ಶ್ಯಾಮಲ ಮತ್ತು ಸಿ.ಎಸ್.ಪಿ. ಸಹಾಯಕ ಹರಿಕುಮಾರ್ ಹಾಸ್ಯ ಪಾತ್ರಗಳು. ಹರಿಕುಮಾರ್ ಕಾರು ನಿಲ್ಲಿಸಿ ಬಂದು ಕುಳಿತ ತಕ್ಷಣ ಕಾರಿನ ಮೇಲೆ ತೆಂಗಿನಕಾಯಿ ಬಿತ್ತೆಂದು ನೋಡಲು ಹೋಗುತ್ತಾರೆ, ಕಾಯಿಗಳು ಬಿದ್ದಿರುತ್ತವೆ. ಆದರೆ ಕಾರಿಗೆ ಅಂತಹ ಡ್ಯಾಮೇಜ್ ಏನೂ ಆಗಿರುವುದಿಲ್ಲ. ಒಂದು ಕಾಯಿಗೂ ತೊಟ್ಟು ಇರುವುದಿಲ್ಲ. ಎಲ್ಲವೂ ಅಟ್ಟದಿಂದ ತಂದ ಒಣಕಾಯಿಯಂತೆ ಸುಕ್ಕುಗಟ್ಟಿದ ಕಾಯಿಯಂತೆ ಕಾಣುತ್ತವೆ. ತೆಂಗಿನ ಮರವೂ ಕಾಣುವುದಿಲ್ಲ. ಪಕ್ಕದ ಮನೆಯಾಕೆ ಸಿ.ಎಸ್.ಪಿ. ಯವರಿಗೆ ಕೇಸ್ ಹಾಕುತ್ತೇನೆ ಎಂದು ಹೆದರಿಸುತ್ತಾಳೆ. ನಿಜಕ್ಕೂ ಈ ಧಾರಾವಾಹಿಯಲ್ಲಿ ಇಂತಹ ಹಾಸ್ಯ ಚೆನ್ನಾಗಿತ್ತು.

—ವೀಣಾ ಶಂಕರ್, ಬೆಂಗಳೂರು

## ಒಂದೇ ಸುದ್ದಿಯ ಸುತ್ತ ಗಿರಕಿ

ಕನ್ನಡದ ಸುದ್ದಿ ವಾಹಿನಿಗಳಿಗೆ ಒಬ್ಬರ ಮೇಲೆ ಕೈಮಾಡಿದ್ದು; ಒಬ್ಬ ನಟ ಮಧ್ಯರಾತ್ರಿ ಪಾರ್ಟಿ ಮತ್ತಿನಲ್ಲಿ ಕಾರು ಓಡಿಸಿ ಅಪಘಾತ ಮಾಡಿಕೊಂಡಿದ್ದು ದೊಡ ಸುದ್ದಿ!. ಆದರೆ ಅದನ್ನೇ ಮತ್ತೆ ಮತ್ತೆ ದಿನವಿಡೀ ಪ್ರಸಾರ ಮಾಡಿದರೆ.. ಎಲ್ಲ ವಾಹಿನಿಗಳಲ್ಲಿ ಇದೇ ಸುದ್ದಿ. ಇದೇನು ಸಂಭ್ರಮಿಸುವ ವಿಷಯವೇ?

ಪ್ರತಿ ಊರಲ್ಲೂ ಅಮಾನವೀಯ ಕೃತ್ಯಗಳೂ ನಡೆಯುತ್ತವೆ. ಕೆಲವು ಕಡೆ ಮಾನವೀಯತೆಯನ್ನು ಮೆರೆಸುವ ಘಟನೆಗಳು ಇರುತ್ತವೆ. ಅವುಗಳ ನೋಟ ವೀಕ್ಷಕರಲ್ಲಿ ಅರಿವು ಮೂಡಿಸಲು ಪ್ರಚೋದನೆ ನೀಡುತ್ತದೆ. ವಾಹಿನಿಗಳು ನಿಜ ಅರ್ಥದಲ್ಲಿ ಬೆಳಕಿನ ಕಿಂಡಿ. ದಯವಿಟ್ಟು ಮನರಂಜನೆ, ಮನೋವಿಕಾಸ ಆಗುವಂತಹ ಸುದ್ದಿಯನ್ನು ಪ್ರಕಟಿಸುವತ್ತ ಗಮನ ಹರಿಸಿ.

– ಸತ್ಯಬೋಧ, ಬೆಂಗಳೂರು

